# ಮಾತೃದರ್ಶನದ ನೆನಪು

ಬಂಗಾಳಿ ಮೂಲ: **ಸ್ವಾಮಿ ಪ್ರಭವಾನಂದ**


ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ನನ್ನ ಹುಟ್ಟೂರಿನಿಂದ ಶ್ರೀಮಾತೆಯವರ ಊರಾದ ಜಯರಾಮಬಾಟಿಗೆ ಸುಮಾರು ೨೦ ಮೈಲು ದೂರವಿದೆ. ಕಲ್ಕತ್ತೆಯಿಂದ ಜಯರಾಮಬಾಟಿಗೆ ಹೋಗುವಾಗ ನಮ್ಮ ಸಣ್ಣ ಪಟ್ಟಣದ (ಬಾಂಕುರ ಜಿಲ್ಲೆಯ ವಿಷ್ಣುಪುರ) ಮೂಲಕ ಹಾದುಹೋಗಬೇಕಾಗುವುದು. ಒಂದು ದಿನ ಸಂಜೆ ನಾವು ಸ್ನೇಹಿತರಿಬ್ಬರೂ ಸುತ್ತಾಡಲು ಹೊರಟೆವು. ಆಗ ನಮ್ಮ ವಯಸ್ಸು ೧೪-೧೫ ಇದ್ದಿರಬಹುದು. ಒಂದು ಹೋಟೆಲಿನ ಹತ್ತಿರ ಒಬ್ಬರು ಕಾವಿಬಟ್ಟೆ ಧರಿಸಿದ್ದ ಸಾಧುಗಳು ನಿಂತಿದ್ದರು. ಅವರ ಅಕ್ಕಪಕ್ಕದಲ್ಲಿ ಕೆಲವು ಮಂದಿ ಮಹಿಳೆಯರಿದ್ದರು. ಅಷ್ಟೊಂದು ಮಹಿಳೆಯರು ಅವರ ನಾಲ್ಕೂ ಕಡೆ ಇದ್ದುದನ್ನು ಕಂಡು, ನಾವು ನಮ್ಮಲ್ಲೇ ಆ ಸಾಧುಗಳ ಬಗ್ಗೆ ಏನೋ ಮಾತನಾಡಿಕೊಳ್ಳುತ್ತ ಮುಂದಕ್ಕೆ ಸಾಗಿದೆವು.

ಆ ಸಾಧುಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬೇಕೆಂಬ ಕುತೂಹಲ ನನಗೆ ಉಂಟಾಯಿತು. ಆದ ಕಾರಣ, ನನ್ನ ಸ್ನೇಹಿತ ಮನೆಗೆ ಹೋದ ಮೇಲೆ, ನಾನು ಮತ್ತೆ ಆ ಸಾಧುಗಳ ಬಳಿಗೆ ಹೋಗಿ, ಪ್ರಣಾಮ ಮಾಡಿದೆ. ಅವರು ನನ್ನನ್ನು ಕೇಳಿದರು: ''ನಿನಗೆ ಶ್ರೀಮಾತೆಯವರ ದರ್ಶನ ಮಾಡುವ ಇಚ್ಛೆ ಇದೆಯೆ?'' ನಾನು 'ಶ್ರೀರಾಮಕೃಷ್ಣ ಕಥಾಮೃತ' (ವಚನವೇದ)ವನ್ನು ಓದಿದ್ದೆ; ಆದ್ದರಿಂದ ಅವರ ಮಾತನ್ನು ಕೇಳಿ ನನಗೆ ತುಂಬಾ ಉತ್ಸಾಹವುಂಟಾಯಿತು. ನಾನಂದೆ: ''ಅವರು ಅಂದರೆ, ಶ್ರೀರಾಮಕೃಷ್ಣ ಪರಮಹಂಸರ ಪತ್ನಿಯೆ?'' ಶ್ರೀಮಾತೆಯವರು ಕೆಲವೇ ಅಡಿಗಳಷ್ಟು ದೂರದಲ್ಲಿ ಕುಳಿತಿದ್ದರು. ಸಾಧುಗಳು ನಗುತ್ತ ಹೇಳಿದರು, ''ಅದೋ, ಅಲ್ಲಿ ಶ್ರೀಮಾತೆಯವರು ಕುಳಿತಿದ್ದಾರೆ. ಪ್ರಣಾಮ ಮಾಡು.'' ನಾನು ಶ್ರೀಮಾತೆಯವರ ಮುಂದೆ ಬಾಗಿ ಅವರ ಪಾದಗಳನ್ನು ಸ್ಪರ್ಶಿಸಿ, ನಮಸ್ಕರಿಸಿದೆ. ಅವರು ನನ್ನ ಕೆನ್ನೆಯನ್ನು ಕೈಯಿಂದ ಸ್ಪರ್ಶಿಸಿ, ಬಳಿಕ ಕೈಯನ್ನು ತಮ್ಮ ತುಟಿಗೆ ಸ್ಪರ್ಶಿಸಿ ಚುಂಬಿಸಿ ಹೇಳಿದರು, ''ಮಗೂ, ನಿನ್ನನ್ನು ನಾನು ಈ ಮೊದಲು ನೋಡಿದ್ದಿಲ್ಲವೆ?'' ನಾನೆಂದೆ, ''ಇಲ್ಲಮ್ಮಾ.'' ಇದೇ ಶ್ರೀಮಾತೆಯವರನ್ನು ನಾನು ಮೊದಲ ಬಾರಿ ಭೇಟಿಯಾದ ಬಗೆ. ಆಗ ನನಗೇನು ಗೊತ್ತಿತ್ತು, ಅವರೇ ಇಡೀ ಜಗತ್ತಿನ ತಾಯಿ, ಅವರು ತಮ್ಮ ಮಕ್ಕಳನ್ನೆಲ್ಲ ಬಲ್ಲರು ಎಂಬುದಾಗಿ!

ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಓದಲು ನಾನು ಕಲ್ಕತ್ತೆಗೆ ಹೋದೆ. ಆಗ ಪ್ರತಿ ಶನಿವಾರಗಳಲ್ಲಿ ಪುರುಷರು ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಹೋಗುತ್ತಿದ್ದರು. ಆಗ ನಾನೂ ಅವರಿಗೆ ಪ್ರಣಾಮ ಮಾಡಲು ಹೋಗುತ್ತಿದ್ದೆ. ಶ್ರೀಮಾತೆಯವರಿಗೆ ಕೇವಲ ಪ್ರಣಾಮ ಮಾಡುವುದಕ್ಕಾಗಿಯೇ ಉದ್ದವಾದ ಒಂದು ಸಾಲು ಇರುತ್ತಿತ್ತು. ಆಗಲೂ ನನಗೆ ಶ್ರೀಮಾತೆಯವರ ಮೇಲೆ ಅಂತಹ ವಿಶೇಷ ಶ್ರದ್ಧೆ ಉಂಟಾಗಿರಲಿಲ್ಲ, ಅವರ ಮಹಿಮೆಯನ್ನೂ ನಾನು ತಿಳಿಯಲಿಲ್ಲ. ಆದರೂ ನಾನು ಅವರ ಬಳಿಗೆ ಹೋಗುತ್ತಿದ್ದೆ — ಕಾರಣ, ನಾನು ಪ್ರತಿಸಲ ಅವರ ಪಾದಗಳನ್ನು ನನ್ನ ಎರಡು ಬೆರಳುಗಳಿಂದ ಸ್ಪರ್ಶ ಮಾಡಿದಾಗಲೂ ನನಗೆ ಸ್ಪಷ್ಟವಾಗಿ ಏನೋ ಒಂದು ಅದ್ಭುತ ಅನುಭವ ಉಂಟಾಗುತ್ತಿತ್ತು, ಏನೋ ಒಂದು ಬಗೆಯ ಎಲೆಕ್ಟ್ರಿಕ್ ಶಾಕ್ ತಗಲಿದಂತೆ. ವಿದ್ಯುತ್ ಹರಿಯುವ ತಂತಿಗೆ ನಮ್ಮ ಕೈ ತಗುಲಿದರೆ, ಶಾಕ್ ಉಂಟಾಗಿ ಕೈಗೆ ಆಘಾತವುಂಟಾಗುತ್ತದೆ; ಆದರೆ ಈ ಅನುಭವ ಹಾಗಲ್ಲ , ಅದು ಅತ್ಯಂತ ಮಧುರವಾದ ಒಂದು ಅನುಭವ. ಅದಾದ ನಂತರ ನನ್ನ ಮನಸ್ಸಿಗೆ ಒಂದು ಬಗೆಯ ಪರಮ ಶಾಂತಿಯ ಭಾವವುಂಟಾಗುತ್ತಿತ್ತು. ಆಗ ನನಗೆ ೧೬-೧೭ ವರ್ಷ ವಯಸ್ಸಾಗಿತ್ತು, ಅಷ್ಟೆ. ಆಗ ಆ ಶಾಂತಿಯ ಭಾವನೆಯೇನೆಂಬುದು ನನಗೆ ಸರಿಯಾಗಿ ಅರ್ಥವಾಗುತ್ತಿರಲಿಲ್ಲ.

ಶ್ರೀಮಾತೆಯವರ ಹಳ್ಳಿಯ ಮನೆಗೆ ಹೋದರೆ ಅವರೊಂದಿಗೆ ಸಹಜವಾಗಿ ಸಾಕಷ್ಟು ಮಾತುಕತೆಯಾಡಬಹುದು ಎಂದು ನಾನು ಕೇಳಿದ್ದೆ. ಸ್ವಾಮಿ ಬ್ರಹ್ಮಾನಂದರಿಂದ ದೀಕ್ಷೆ ಪಡೆದ ಬಳಿಕ ನನ್ನ ಸ್ನೇಹಿತನೊಬ್ಬನ ಜೊತೆಗೆ ನಾನು ಜಯರಾಮಬಾಟಿಗೆ ಹೋದೆ. ನನ್ನ ಸ್ನೇಹಿತನೂ ಮುಂದೆ ಸಂನ್ಯಾಸಿಯಾದ. ಆಗ ನನಗೆ ೧೮-೨೦ ವರ್ಷ ವಯಸ್ಸು. ಮೊದಲೇ ಶ್ರೀಮಾತೆಯವರಿಗೆ ತಿಳಿಸಿ ಹೋಗುವುದು ಒಳ್ಳೆಯದು ಎಂದು ನನಗೆ ಒಂದು ಬಾರಿಯೂ ಅನ್ನಿಸಲಿಲ್ಲ. ಹೋದ ಬಳಿಕ ನೋಡಿದರೆ ಅವರಿಗೆ ಪತ್ರ ಬರೆಯುವ ಅಗತ್ಯವೇ ಇಲ್ಲವೆಂದು ತಿಳಿದುಬಂತು. ನಾವು ಅಲ್ಲಿಗೆ ತಲುಪುತ್ತಲೇ ಅವರ ಸೇವಕರು ನಮಗೆ ತಿಳಿಸಿದರು, ಶ್ರೀಮಾತೆಯವರು ಈಗಾಗಲೇ ಅವರಿಗೆ ತಿಳಿಸಿ ಬಿಟ್ಟಿದ್ದರು, ರಾಖಾಲನ (ಸ್ವಾಮಿ ಬ್ರಹ್ಮಾನಂದರು) ಇಬ್ಬರು ಶಿಷ್ಯಂದಿರು ಬರುತ್ತಾರೆ, ಅವರು ತಂಗಲು ವ್ಯವಸ್ಥೆ ಮಾಡಬೇಕು — ಎಂಬುದಾಗಿ. ನಾವು ಜಯರಾಮಬಾಟಿ ತಲುಪಿದಾಗ ಎಲ್ಲರೂ ಮಧ್ಯಾಹ್ನದ ಊಟ ಮಾಡಿ ಮುಗಿಸಿದ್ದರು, ಆಹಾರವೆಲ್ಲ ಮುಗಿದಿತ್ತು. ಆದರೆ ಶ್ರೀಮಾತೆಯವರು ನಮಗೋಸ್ಕರ ಸ್ವಲ್ಪ ಆಹಾರ ತೆಗೆದಿರಿಸಿದ್ದರು. ಬಾಳೆಲೆಯಲ್ಲಿ ನಮಗೆ ಊಟ ಬಡಿಸಿದರು. ಶ್ರೀಮಾತೆಯವರು ನಮ್ಮ ಬಳಿ ಕುಳಿತೇ ಇದ್ದರು. ನಾವು ಊಟ ಮಾಡುತ್ತ ಅವರೊಂದಿಗೆ ಮಾತನಾಡಲು ಆರಂಭಿಸಿದೆವು. ಊಟ ಮುಗಿಸಿ, ಎಂಜಲು ಎಲೆ ಎತ್ತಲು ಹೋದರೆ ಶ್ರೀಮಾತೆ ಹೇಳಿದರು: ''ಇದೇನು ಮಾಡುತ್ತಿದ್ದೀಯಾ?'' ನನ್ನ ಸ್ನೇಹಿತ ಸಂಕೋಚಪಟ್ಟು ಸುಮ್ಮನಿದ್ದ. ನಾನೆಂದೆ, ''ಈ ಎಂಜಲೆಲೆಯನ್ನು ಇಲ್ಲೇ ಹಾಗೆ ಬಿಟ್ಟು ಹೋಗಬಾರದಲ್ಲ, ಅಮ್ಮಾ.'' ಅವರು ಸರಳ ಭಾವದಿಂದ ಹೇಳಿದರು, ''ನಿನ್ನ ಮನೆಯಲ್ಲಿ ನಿನ್ನ ತಾಯಿ ನಿನ್ನ ಪಕ್ಕದಲ್ಲೇ ಕುಳಿತುಕೊಂಡಿದ್ದರೆ, ನೀನೇನು ಮಾಡುತ್ತಿದ್ದೆ?'' ನನಗೆ ಸಮಾಧಾನವುಂಟಾಯಿತು. ನಾವು ಎದ್ದು ಹೋದೆವು; ಶ್ರೀಮಾತೆ



ಸ್ವಾಮಿ ಪ್ರಭವಾನಂದ

ಯವರು ನೆಲವನ್ನು ಸ್ವಚ್ಛಗೊಳಿಸಿದರು.

ಶ್ರೀಮಾತೆಯವರಲ್ಲಿ ಒಂದು ವಿಶೇಷತೆಯಿತ್ತು. ಅವರ ಬಳಿಗೆ ಬಂದ ಅನೇಕರಿಗೆ ಅನ್ನಿಸುತ್ತಿತ್ತು, ಅವರು ಸಾಕ್ಷಾತ್ ತಮ್ಮ ತಾಯಿಯೇ ಎಂಬಂತೆ. ನನಗೂ ಹೀಗೆಯೇ ಅನ್ನಿಸಿತ್ತು. ಬೇರೆಯವರ ಬಳಿ ಕೇಳಿದಾಗ, ಅವರು ತಮಗೂ ಇದೇ ರೀತಿ ಅನುಭವವಾಗಿದೆ ಎಂದು ಅವರು ನನಗೆ ತಿಳಿಸಿದರು. ಶ್ರೀಮಾತೆಯವರು ನಿಜವಾಗಿಯೂ ನನ್ನ ತಾಯಿಯ ಹಾಗೆ — ಸಹಜ, ಸರಳ ಸ್ವಾಭಾವಿಕವಾಗಿ ಅವರು ಜನ್ಮಕೊಟ್ಟ ತಾಯಿ ಎಂದು ನನಗನ್ನಿಸಿದೆ. ಇನ್ನೂ ನನಗೆ ಅವರ ಬಗ್ಗೆ ಈ ಭಾವನೆಯಷ್ಟೇ ಇತ್ತು; ಅವರ ಆಧ್ಯಾತ್ಮಿಕ ಹಿರಿಮೆಯನ್ನು ಕುರಿತು ನನಗೆ ಸಂಪೂರ್ಣ ಅಜ್ಞಾನವೇ ಇತ್ತು; ಹಾಗಿದ್ದರೂ, ಆಗ ನಮ್ಮ ನಡುವೆ ನಡೆದ ಈ ಒಂದು ಘಟನೆ ನನಗೆ ಅರ್ಥವಾಗಿರಲಿಲ್ಲ. ಆದರೆ ಈಗ ನಾನು ಹೇಳಬಲ್ಲೆ , ಮೊದಲು ನನಗೆ ಶ್ರೀಮಾತೆಯವರ ಕೃಪೆ ದೊರೆತದ್ದರಿಂದಲೇ ನನಗೆ ಅನಂತರ ಸ್ವಾಮಿ ಬ್ರಹ್ಮಾನಂದರ ಕೃಪೆ ದೊರಕಿತು; ಹಾಗೂ ನಾನು ರಾಮಕೃಷ್ಣ ಮಹಾಸಂಘವನ್ನು ಸೇರಲು ಸಾಧ್ಯವಾಯಿತು.

ಶ್ರೀಮಾತೆಯವರಲ್ಲಿ ಯಾವುದೇ ಬಾಹ್ಯ ಐಶ್ವರ್ಯದ ಪ್ರಕಾಶವಿರಲಿಲ್ಲ , ಅಥವಾ ಹೊರನೋಟದ ದಿವ್ಯಪ್ರಭೆಯಿರಲಿಲ್ಲ. ಒಂದು ರೀತಿಯ ದಿವ್ಯ ಪ್ರಭೆಯೇನೋ ಅವರಲ್ಲಿ ಇದ್ದೇ ಇತ್ತು. ಆದರೆ ಅದು, ಅವರು ಶ್ರೀರಾಮಕೃಷ್ಣರ ಸಹಧರ್ಮಿಣಿಯಾಗಿದ್ದರು ಎಂಬ ಕಾರಣದಿಂದಲ್ಲ ; ಸಹಸ್ರಾರು ಮಂದಿ ದೇವಾಲಯಕ್ಕೆ ಹೋಗಿ ದೇವದೇವತೆಗಳಿಗೆ ಹೇಗೆ ಪೂಜೆ ಮಾಡುವರೋ, ಅದೇ ರೀತಿ ಅಕ್ಷರಶಃ ಪೂಜೆ ಮಾಡಿರುವುದು ಶ್ರೀಮಾತೆಯವರಿಗೆ ಮಾತ್ರ — ಅವರನ್ನು ಬಿಟ್ಟು ಬುದ್ಧ, ಕ್ರಿಸ್ತ ಅಥವಾ ಶ್ರೀರಾಮಕೃಷ್ಣ ಇವರಾರಿಗೂ ಅವರು ಬದುಕಿದ್ದಾಗ ಹೀಗೆ ಮಾಡಿರಲಿಲ್ಲ. ಅದಲ್ಲದೆ, ಸಹಸ್ರಾರು ಮಂದಿ ಶ್ರೀಮಾತೆಯವರನ್ನು ಜಗನ್ಮಾತೆಯೆಂದೇ ಭಾವಿಸಿ ಪೂಜೆ ಮಾಡಿದ್ದನ್ನು ನಾನು ಕಂಡಿದ್ದೇನೆ. ಆದರೆ ಈ ವಿಷಯದಲ್ಲಿ ಶ್ರೀಮಾತೆಯವರು ಸಂಪೂರ್ಣವಾಗಿ ಉದಾಸೀನರಾಗಿದ್ದರು; ನಿರ್ಲಿಪ್ತರಾಗಿದ್ದರು. ಅನೇಕರ ಜೀವನದಲ್ಲಿ ಶ್ರೀಮಾತೆಯವರ ಅಸಾಧಾರಣ ಶಕ್ತಿಯ ಅರಿವು ಉಂಟಾಗಿತ್ತು; ಅವರ ಸ್ಪರ್ಶಮಾತ್ರದಿಂದಲೇ ಅವರು ಮುಕ್ತಿ ಹೊಂದಿದ್ದಾರೆ. ನಮ್ಮ ತಾಯಿ ಸಾಕ್ಷಾತ್ ಜಗನ್ಮಾತೆಯೇ ಆಗಿದ್ದರು.*

* ‘*Sri Sarada Devi: The Great Wonder*’, *Advaita Ashrama, Kolkata, 2011, P.172-74*; **‘ಮಾಯೇರ್ ಪದಪ್ರಾಂತೇ’**, ಭಾಗ ೩, ‘ಉದ್ಬೋಧನ ಕಾರ್ಯಾಲಯ,’ ೨೦೧೧, ಪು. ೫೭೩–೭೫ (ಬಂಗಾಳಿ ಅನುವಾದ)


## ಶ್ರೀರಾಮಕೃಷ್ಣ ಶಾರದಾಶ್ರಮ

**ಪೊನ್ನಂಪೇಟೆ - 571216, ಕೊಡಗು ಜಿಲ್ಲೆ, ಫೋನ್ : 08274298244, 7795119774**

Email: ponnampet@rkmm.org Web: www.rkmponnampet.org

## ಆಧ್ಯಾತ್ಮಿಕ ಶಿಬಿರ ಹಾಗೂ ಜಪಯಜ್ಞ

**12.10.2022 ರಿಂದ 16.10.2022**

ಪೊನ್ನಂಪೇಟೆಯಲ್ಲಿ ನಿರ್ಮಾಣವಾಗಿರುವ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರದ 13ನೇ ವಾರ್ಷಿಕೋತ್ಸವದ ಪ್ರಯುಕ್ತ, 2022ರ ಅಕ್ಟೋಬರ್ 12 ರಿಂದ 16ರ ವರೆಗೆ, ಆಶ್ರಮದಲ್ಲಿ 5 ದಿನಗಳ ಆಧ್ಯಾತ್ಮಿಕ ಶಿಬಿರವನ್ನು ಆಯೋಜಿಸಲಾಗಿದೆ. ರಾಮಕೃಷ್ಣ ಮಠದ ಹಿರಿಯ ಯತಿಗಳಾದ ಸ್ವಾಮಿ ನಿತ್ಯಸ್ಥಾನಂದಜಿ, ಮುಕ್ತಿದಾನಂದಜಿ, ಮಂಗಳನಾಥಾನಂದಜಿ ಮತ್ತಿತರರು ಶಿಬಿರದಲ್ಲಿ ಭಕ್ತರಿಗೆ ಮಾರ್ಗದರ್ಶನ ನೀಡಲಿದ್ದಾರೆ. ಶಿಬಿರದಲ್ಲಿ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳೂ ಆಯೋಜಿಸಲಾಗಿದೆ.

**ನೋಂದಣಿ ಶುಲ್ಕ : ವಸತಿ ರಹಿತ : ರೂ. 1000/- ವಸತಿ ಸಹಿತ : ರೂ. 2000/-**

**ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 10-10-2022**

(ಅರ್ಜಿಯಲ್ಲಿ ಹೆಸರು, ವಯಸ್ಸು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನು ನೀಡಬೇಕು.
ನಿಗದಿತ ಅರ್ಜಿಗಾಗಿ ಆಶ್ರಮದ ಕಾರ್ಯಾಲಯವನ್ನು ಸಂಪರ್ಕಿಸಿ)

**ವಿ.ಸೂ:** ಎಲ್ಲ ಕಾರ್ಯಕ್ರಮಗಳೂ ಆಶ್ರಮದಲ್ಲೇ ನಡೆಯುತ್ತವೆ. ಗೋಣಿಕೊಪ್ಪಲು ಕೂರ್ಗ್ ಪಬ್ಲಿಕ್ ಸ್ಕೂಲ್‌ನಲ್ಲಿ ಭಕ್ತರಿಗೆ ಅನುಕೂಲವಾಗುವಂತೆ ವಸತಿ ವ್ಯವಸ್ಥೆ ಮಾಡಲಾಗಿದೆ. 11.10.2022 ರಂದು ಬೆಳಗ್ಗೆ 10.30ಕ್ಕೆ ಬೆಂಗಳೂರಿನಿಂದ ಪೊನ್ನಂಪೇಟೆಗೆ ಬಸ್ ವ್ಯವಸ್ಥೆ ಮಾಡಲಾಗಿದೆ. ಬಸ್ ಬುಕಿಂಗ್‌ಗಾಗಿ ಈ ಕೆಳಗಿನ ಫೋನ್ ಸಂಖ್ಯೆಗಳನ್ನು ಸಂಪರ್ಕಿಸಿ : 98450 05273

ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ದಿವ್ಯತ್ರಯರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

RTGS/ NEFT / UPI/ IMPS ಬ್ಯಾಂಕ್ ವಿವರಗಳು:
Sri Ramakrishna Sharadashrama, Ponnampet.
Union Bank of India, SB A/c.no.520101041841472.
IFSC Code : UBIN0900320 (ಪತ್ರ, ಅಥವಾ ಇ-ಮೇಲ್ ಮೂಲಕ ವಿವರಗಳನ್ನು ತಿಳಿಸಿರಿ)

ಭಗವತ್ಸೇವೆಯಲ್ಲಿ ತಮ್ಮ,
**ಸ್ವಾಮಿ ತತ್ತ್ವರೂಪಾನಂದ**
ಅಧ್ಯಕ್ಷರು